ಓ.ಎಸ್ ನಂ.*53/2016*

ಡಿ.ಡಬ್ಲು-*2*

ಸಾಕ್ಷಿಯನ್ನು ಇಂದು ದಿನಾಂಕಃ *28.03.2025* ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು

ಪಾಟೀ ಸವಾಲು : ವಾದಿ ಪರ ಶ್ರೀ ಪಿ.ವಿ.ಎ. ವಕಿಲರಿಂದ

ವಾದಿಯು ಪ್ರತಿವಾದಿಯರ ಮೇಲೆ ಈ ದಾವೆಯನ್ನು ಜಾಗದ ಸಲುವಾಗಿ ಮಾಡಿರುತ್ತಾನೆ. ದಾವಾ ಆಸ್ತಿಯ ನಂಬರ್ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯು ಮೊದಲು ದ್ಯಾವಪ್ಪನ ಹೆಸರಿನಲ್ಲಿತ್ತು ಅವರು ತೀರಿಕೊಂಡಿರುತ್ತಾರೆ, ಈಗ ಪ್ರತಿವಾದಿ ನಂ.೧ರವರ ಹೆಸರಿನಲ್ಲಿರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ ರೇವಣಸಿದ್ದ ಬಾಚನಳ್ಳಿ ಅವರ ಮನೆ, ಪಶ್ಚಿಮಕ್ಕೆ ಶಿವಪ್ಪ ಕೋರೆ ರವರ ಮನೆ ಮತ್ತು ಸ್ವಲ್ಪ ಖುಲ್ಲಾ ಜಾಗ ಇರುತ್ತದೆ, ಉತ್ತರಕ್ಕೆ ಹಾವಪ್ಪ ಕಿವಡಿ ರವರ ಹೆಸರಿನಲ್ಲಿತ್ತು, ಈಗ ಅವರ ಹೆಂಡತಿ ಪುತಳಾಬಾಯಿ ಹೆಸರಿನಲ್ಲಿರುತ್ತದೆ, ದಕ್ಷಿಣಕ್ಕೆ ಭೀಮಶಾ ರಾಗಿ ಅವರ ಮನೆ ಇರುತ್ತದೆ. ಈಗ ನಾನು ಹೇಳಿದ ಚತುರ್ಸೀಮೆಗೆ ಅನುಗುಣವಾಗಿ ಯಾವುದೇ ಜಾಗ ಇರುವುದಿಲ್ಲ ಎಂಧರೆ ಸರಿ ಅಲ್ಲ. ನರೋಣಾ ಪಂಚಾಯತಿಯಲ್ಲಿ ಚಿದಾನಂದನ ಹೆಸರಿನಲ್ಲಾಗಲಿ ಅವನ ಮಗ ಶಾಮರಾವನ ಹೆಸರಿನಲ್ಲಿಯಾಗಲಿ ಯಾವುದೇ ಜಾಗವು ನಮೂದು ಇರುವುದಿಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿ ನಂ.೧ ಕಿವಡೆ ಮನೆತನದವರಲ್ಲ, ಕಿವಡೆ ಮನೆತನದವರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಪ್ರತಿವಾದಿ ನಂ.೧ ಮತ್ತು ೨ ರವರು ಕೂಲಿಕೆಲಸ ಮಾಡುತ್ತಾರೆ. ಪ್ರತಿವಾದಿ ನಂ.೧ ಮತ್ತು ೨ ರವರು

ಯಾವತ್ತೂ ಗುಲಬರ್ಗಾದಲ್ಲಿರುತ್ತಿದ್ದರು ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಮೊದಲು ಇರುತ್ತಿದ್ದರು, ಈಗ ನರೋಣಾದಲ್ಲಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.೧ ಮತ್ತು ೨ ರವರ ರೇಶನ್ ಕಾರ್ಡ ಆಗಲಿ ಆಧಾರ ಕಾರ್ಡ ಆಗಲಿ ನರೋಣಾದಲ್ಲಿರುವುದಿಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿ ನಂ.೩ ಪ್ರತಿವಾದಿ ನಂ.೧ ಮತ್ತು ೨ ರವರ ಸೋದರ ಮಾವ ಇರುತ್ತಾನೆ ಎಂಧರೆ ಸರಿ ಮತ್ತು ಪ್ರತಿವಾದಿ ನಂ.೪ ರಿಂದ ೬ ರವರು ಪ್ರತಿವಾದಿ ನಂ.೩ ರವರ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ ಎಂದರೆ ಸರಿ.

ಪ್ರತಿವಾದಿ ನಂ.೧ ಮತ್ತು ೨ ರವರು ದೂರದ ಸಂಬಂಧದಲ್ಲಿ ಸೋದರ ಅಳಿಯಂದಿರಾಗಬೇಕು. ಪ್ರತಿವಾದಿ ನಂ.೩ ರಿಂದ ೬ ರವರು ಪ್ರತಿವಾದಿ ನಂ.೧ ಮತ್ತು ೨ ರವರನ್ನು ಗುಲಬರ್ಗಾದಿಂದ ನರೋಣಾಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದ ತಾವೇ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.೧ ಮತ್ತು ೨ ರವರು 20015-16 ಕ್ಕಿಂತ ಮುಂಚೆ ಗುಲಬರ್ಗಾದಲ್ಲಿ ಇರುತ್ತಿದ್ದರು ಎಂದರೆ ಸರಿ, ಸಾಕ್ಷಿ ಮುಂದುವರೆದು ಅವರ ಜಮೀನು ಇರುತ್ತದೆ ಆಗಾಗ ಬಂದು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಸಲುವಾಗಿ ವಾದಿ ಮತ್ತು ಪ್ರತಿವಾದಿ ನಂ.೧ ಮತ್ತು ೨ ರವರ ನಡುವೆ ಜಗಳವಾಗಿತ್ತು ಮತ್ತು ಪ್ರಕರಣ ದಾಖಲಾಗಿದ್ದವು ಎಂದರೆ ಸರಿ. ಪ್ರತಿವಾದಿ ನಂ.೧ ಮತ್ತು ೨ ರವರು ನಾವು ಕಿವಡೆ ಮನೆತನದವರು ಇರುತ್ತೇವೆ ಜಾಗ ಕೊಡಿ ಎಂದು ಜಗಳ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ ನಂ.೧ ಮತ್ತು ೨ ರವರು ಇವತ್ತಿನವರೆಗೂ ಯಾವುದೇ ರೀತಿಯಾದ ದಾವಾ ಆಸ್ತಿಯನ್ನು ಹಂಚಿಕೊಡಿ ಎಂದು ದಾವೆ ಹಾಕಿರುವುದಿಲ್ಲ ಎಂದರೆ ಸರಿ ಅಲ್ಲ. ದಾವಾ ಆಸ್ತಿ ನಂ. 11/56 ಪೂರ್ವ-ಪಶ್ಚಿಮ 40 ಫೀಟು ಉತ್ತರ-ದಕ್ಷಿಣ 50 ಫೀಟ್, ಮತ್ತು ಉತ್ತರ ದಕ್ಷಿಣ 20 ಫೀಟ್ (ಎಲ್ ಶೇಪ್) ಜಾಗವು ವಾದಿಯರದ್ದು ಇರುತ್ತದೆ, ಪ್ರತಿವಾದಿಯರು ಅದಕ್ಕೆ ಯಾವುದೇ ರೀತಿಯ ಸಂಬಂಧವಿರುವುದಿಲ್ಲ ಎಂದರೆ ಸರಿ ಅಲ್ಲ, ಸಾಕ್ಷಿಯು ಮುಂದುವರೆದು ಮೊದಲು ದಾವಾ ಆಸ್ತಿ ದ್ಯಾವಪ್ಪನ ಹೆಸರಿನಲ್ಲಿತ್ತು ನಂತರ ವಾದಿ ಮಾಡಿಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ದ್ಯಾವಪ್ಪನ ಹೆಸರಿನಲ್ಲಿದೆ ಎಂದು ಯಾವುದಾದರೂ ದಾಖಲಾತಿಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ಕರವನ್ನು ವಾದಿಯೇ ಕಟ್ಟುತ್ತಾನೆ ಎಂಧರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿ ನಂ.೨ ಕಬ್ಜಾದಲ್ಲಿರುತ್ತಾನೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.೧ ಕಬ್ಜಾದಲ್ಲಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಪ್ರತಿವಾದಿಯರು ನನ್ನ ಸಂಬಂಧಿಕರಾಗಬೇಕಾದ ಕಾರಣ, ಮತ್ತು ಊರಿನವರು ಯಾರೂ ಪ್ರತಿವಾದಿಯರ ಪರವಾಗಿ ಸಾಕ್ಷಿ ನುಡಿಯಲು ಬರದೇ ಇರದ ಕಾರಣ ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿ ಅಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿ ನನಗೆ ಗೊತ್ತಿಲ್ಲ ಎಂಧರೆ ಸರಿ ಅಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.